## ಉಚಿತ ವೆಬ್ ಸೌಲಭ್ಯ




ಪ್ರಯಾಣ ಮಾಡುತ್ತಿರುವಾಗಲೇ ಮೊಬೈಲ್‌ಗೆ ಅಂತರ್ಜಾಲ ಸಂಪರ್ಕ ಬೇಕಾ? ಅದೂ ಉಚಿತವಾಗಿ. ಸ್ಮಾರ್ಟ್‌ಫೋನ್‌ನ ಹೊಸ ಅಪ್ಲಿಕೇಶನ್ 'ಓಪನ್ ಗಾರ್ಡನ್' ನಿಮಗೆ ಈ ಸೌಲಭ್ಯ ಒದಗಿಸಲಿದೆ. ನಿಮಗೆ ಸಮೀಪ ಇರುವ ವ್ಯಕ್ತಿಗಳ ಮೊಬೈಲ್‌ನಲ್ಲಿ ಈ ಅಪ್ಲಿಕೇಶನ್ ಇದ್ದರೆ ಸಾಕು.

ಈ ಅಪ್ಲಿಕೇಶನ್ ಸುತ್ತಲೂ ಒಂದು ರೀತಿಯ ಸಂಪರ್ಕ ಜಾಲವನ್ನು ಏರ್ಪಡಿಸಿ ಹತ್ತಿರ ಇರುವವರ ಫೋನ್‌ಗಳಿಗೆಲ್ಲ ವೆಬ್ ಸಂಪರ್ಕ ಕಲ್ಪಿಸುತ್ತದೆ. ಪ್ರತಿಯೊಂದು ಸ್ಮಾರ್ಟ್‌ಫೋನ್ ಕಂಪ್ಯೂಟರ್ ಮತ್ತು ರೂಟರ್‌ನಂತೆ ಕೆಲಸ ಮಾಡುತ್ತದೆ. ಹೀಗಾಗಿ ಈ ಉಪಕರಣಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುವ ಅಪ್ಲಿಕೇಶನ್ ಅನ್ನು ಸ್ಯಾನ್‌ಫ್ರಾನ್ಸಿಸ್ಕೋ ಮೂಲದ ಕಂಪೆನಿ ಅಭಿವೃದ್ಧಿಪಡಿಸಿದೆ. ಮೊಬೈಲ್ ಸಾಧನಗಳು ಸಮೀಪದಲ್ಲಿದ್ದಾಗ ಈ ಸಂಪರ್ಕ ಜಾಲವನ್ನು ಗುರುತಿಸುತ್ತವೆ. ಒಬ್ಬ ಬಳಕೆದಾರ ಹೋಟೆಲ್‌ನಲ್ಲೋ, ಪಾರ್ಕ್‌ನಲ್ಲೋ ಕುಳಿತಿರುತ್ತಾನೆ ಎಂದಿಟ್ಟುಕೊಳ್ಳಿ. ಆತನ ಬಳಿ ವೈ-ಫಿ ಸಂಪರ್ಕ ಇಲ್ಲದಿದ್ದರೂ ಅಂತರ್ಜಾಲ ಸಂಪರ್ಕ ಪಡೆಯಲು ಚಿಂತಿಸಬೇಕಾಗಿಲ್ಲ. ಈ ಓಪನ್ ಗಾರ್ಡನ್ ಅಪ್ಲಿಕೇಶನ್ ಇದ್ದರೆ ಸಾಕು. ಸಮೀಪದಲ್ಲಿ ಕುಳಿತವನ ಫೋನಿನಲ್ಲಿ ಇದೇ ಅಪ್ಲಿಕೇಶನ್ ಹಾಗೂ ವೈ-ಫಿ ಇದ್ದರೆ ಅಂತರ್ಜಾಲ ಸಂಪರ್ಕ ಸಿಕ್ಕಿಬಿಡುತ್ತದೆ. ಪ್ರಯಾಣಿಸುವಾಗ ದುಬಾರಿ ರೋಮಿಂಗ್ ಶುಲ್ಕ ತಪ್ಪಿಸಲು ಈ ಅಪ್ಲಿಕೇಶನ್ ಒಳ್ಳೆಯದು.

ಇದರಲ್ಲಿ ಇನ್ನೊಂದು ಸೌಲಭ್ಯವಿದೆ. ಮೊದಲು ಸಂಪರ್ಕ ಸಿಕ್ಕಿದ ಮೊಬೈಲ್ ಬಳಕೆದಾರ ಅಂತರ್ಜಾಲ ಸಂಪರ್ಕ ಬಂದ್ ಮಾಡಿದರೆ, ಈ ಅಪ್ಲಿಕೇಶನ್ ತನ್ನಿಂದ ತಾನೇ ಇನ್ನೊಬ್ಬ ಬಳಕೆದಾರನ ಸಂಪರ್ಕವನ್ನು ಹುಡುಕುತ್ತದೆ. ಈ ಅಪ್ಲಿಕೇಶನ್ ಆ್ಯಂಡ್ರಾಯ್ಡ್, ವಿಂಡೋಸ್ ಮತ್ತು ಮ್ಯಾಕ್‌ನಲ್ಲಿ ಲಭ್ಯ. ಇದನ್ನು ಐಫೋನ್ ಮತ್ತು ಟ್ಯಾಬ್ಲೆಟ್‌ನಲ್ಲೂ ಬಳಸಬಹುದು.

## ಕಿರಿಕಿರಿ ಸಂದೇಶಗಳಿಗೆ ಕಡಿವಾಣ

ಮೊಬೈಲ್‌ಗೆ ಕಳಿಸುವ ಕಿರು ಸಂದೇಶಗಳಿಂದ ಕಿರಿಕಿರಿಯಾಗುತ್ತಿದ್ದರೆ ಅದನ್ನು ಓದುವ ಮೊದಲು ನಿಮ್ಮನ್ನು ಮಾನಸಿಕವಾಗಿ ಸಜ್ಜುಗೊಳಿಸುವ ಅಪ್ಲಿಕೇಶನ್ ಅನ್ನು ಆ್ಯಂಡ್ರಾಯ್ಡ್ ಅಭಿವೃದ್ಧಿಪಡಿಸಿದೆ. ಇದು 'ಸ್ಟ್ರೆಸ್ ಎಟ್ ವರ್ಕ್' ಅಪ್ಲಿಕೇಶನ್. ಅಂದರೆ ಕೆಲಸದಲ್ಲಿರುವಾಗ ಯಾರೋ ಕಳಿಸಿದ ಕೆಟ್ಟ ಸಂದೇಶ ಓದಿ ನಿಮಗೆ ಕೋಪ ಬರುವುದನ್ನು ತಡೆಯುವುದು ಈ ಅಪ್ಲಿಕೇಶನ್ ಕೆಲಸ.

ಈ ಅಪ್ಲಿಕೇಶನ್‌ನಲ್ಲಿ ಬಣ್ಣದ ಸಂಕೇತ ಬಳಸಲಾಗಿದೆ. ಒಳ್ಳೆಯ ಸಂದೇಶ ಬಂದಾಗ ಅದು ಹಸಿರು ಬಣ್ಣ ತೋರಿಸುತ್ತದೆ. ಕೆಟ್ಟ ಸಂದೇಶಕ್ಕೆ ಕೆಂಪು ಹಾಗೂ ತಟಸ್ಥ ಸಂದೇಶಕ್ಕೆ ನೀಲಿ ಬಣ್ಣ ಕಾಣಿಸುತ್ತದೆ. ಫೇಸ್‌ಬುಕ್ ಮತ್ತು ಟ್ವಿಟ್ಟರ್ ಮೂಲಕ ಕಳಿಸಿದ ಸಂದೇಶಗಳಿಗೂ ಇದು ಅನ್ವಯವಾಗುತ್ತದೆ. ಈ ಅಪ್ಲಿಕೇಶನ್ ಅನ್ನು ಉಚಿತವಾಗಿ ಡೌನ್‌ಲೋಡ್ ಮಾಡಲು ಆ್ಯಂಡ್ರಾಯ್ಡ್ ಜೂನ್ ಅಂತ್ಯಕ್ಕೆ ಅನುವು ಮಾಡಿಕೊಡಲಿದೆ.

## ಮೊಝಿಲ್ಲಾ ಮಾರ್ಕೆಟ್‌ಪ್ಲೇಸ್

ಮೊಝಿಲ್ಲಾ ಮಾರ್ಕೆಟ್‌ಪ್ಲೇಸ್‌ನ ಪ್ರಾಥಮಿಕ ಆವೃತ್ತಿಯನ್ನು ಇದೀಗ ಬಳಸಬಹುದಾಗಿದೆ. 'ಫೈರ್‌ಫಾಕ್ಸ್ 16 ನೈಟ್ಲಿ' ಬಳಕೆದಾರರು ಇದನ್ನು ಅಳವಡಿಸಿಕೊಳ್ಳಬಹುದು. ಇದು ನೂರಕ್ಕೂ ಅಧಿಕ ಅಪ್ಲಿಕೇಶನ್‌ಗಳನ್ನು ಹೊಂದಿದ್ದು ಎವ್ವರ್‌ನೋಟ್, ಜಾಲಿಕ್ಲೌಡ್, ಸ್ಪ್ರಿಂಗ್‌ಬೋರ್ಡ್ ಇವುಗಳಲ್ಲಿ ಕೆಲವು.

ಈ ಮೊದಲು ಮಾರ್ಕೆಟ್‌ಪ್ಲೇಸ್‌ಗೆ ಲಿನುಕ್ಸ್ ಸಪೋರ್ಟ್ ಇಲ್ಲ ಎಂಬ ಆರೋಪವಿತ್ತು. ಆದರೆ ಇದೀಗ ಈ ಆರೋಪಗಳನ್ನು ಅಲ್ಲಗಳೆದಿರುವ ಕಂಪೆನಿ ಈ ಅಪ್ಲಿಕೇಶನ್ ಅನ್ನು ಮ್ಯಾಕ್ ಮತ್ತು ವಿಂಡೋಸ್‌ನಲ್ಲಿ ಬಳಸಬಹುದು ಎಂದು ಹೇಳಿದೆ. ಜೊತೆಗೆ ಇದು ಡೆಸ್ಕ್‌ಟಾಪ್ ಪ್ರೋಗ್ರಾಮಿನಂತೆ ವರ್ತಿಸುತ್ತದೆ. ಅಂದರೆ ವಿಂಡೋಸ್ ಸ್ಟಾರ್ಟ್ ಮೆನುವಿನಿಂದ ಕೂಡಾ ಅಳವಡಿಸಿಕೊಳ್ಳಬಹುದು.

## ಬೇಡದ ಜಾಹೀರಾತಿನಿಂದ ಮುಕ್ತಿ

ನಿಮ್ಮ ನೆಚ್ಚಿನ ಕಾರ್ಯಕ್ರಮವನ್ನು ಟೀವಿಯಲ್ಲಿ ವೀಕ್ಷಿಸುತ್ತಿರುವಾಗ ಪದೇ ಪದೇ ಕಾಣಿಸಿಕೊಳ್ಳುವ ಜಾಹೀರಾತಿನಿಂದ ಸಿಟ್ಟು ಬರುತ್ತಿದೆಯಾ? ಇದಕ್ಕೊಂದು ಪರಿಹಾರವನ್ನು ಮೈಕ್ರೋಸಾಫ್ಟ್‌ನ ಎಕ್ಸ್‌ಬಾಕ್ಸ್ 360 ಕಿನೆಕ್ಟ್ ನೀಡಲಿದೆ. ಇದರಲ್ಲಿರುವ ಕ್ಯಾಮೆರಾ ನಿಮ್ಮ ಮನಃಸ್ಥಿತಿಯನ್ನು ಸೆರೆ ಹಿಡಿಯುತ್ತದೆ.




ಅಂದರೆ ಟೀವಿಯಲ್ಲಿ ಬರುವ ಜಾಹೀರಾತುಗಳು ನಿಮಗೆ ಹಿಡಿಸಿವೆಯೇ ಅಥವಾ ಕಿರಿಕಿರಿ ಮಾಡುತ್ತಿವೆಯೇ ಎಂಬುದನ್ನು ಅದು ನಿಮ್ಮ ಮುಖಭಾವದ ಮೇಲೆ ಕಂಡುಹಿಡಿದು ಮುಂದೆ ಅಂತಹ ಜಾಹೀರಾತುಗಳನ್ನು ತೋರಿಸಬೇಕೇ ಅಥವಾ ಬೇಡವೇ ಎಂಬುದನ್ನು ಎಕ್ಸ್‌ಬಾಕ್ಸ್ ನಿರ್ಧರಿಸುತ್ತದೆ. ಮುಂದೆ ನಿಮಗೆ ಬೇಕಾದ ಜಾಹೀರಾತುಗಳನ್ನು ಮಾತ್ರ ವೀಕ್ಷಿಸಿ ಆನಂದಿಸಬಹುದು.

ಆದರೆ ಯಂತ್ರವೊಂದು ತಮ್ಮ ಪ್ರತಿಯೊಂದು ಚಲನವಲನಗಳ ಮೇಲೆ ನಿಗಾ ಇಡುವುದು ಹಲವರಿಗೆ ಖಾಸಗೀತನ ಕಳೆದುಕೊಳ್ಳುವ ಅನಿಸಿಕೆ ಉಂಟು ಮಾಡಬಹುದು. ಏನೇ ಇರಲಿ, ಅನಗತ್ಯ ಜಾಹೀರಾತುಗಳ ಕಿರಿಕಿರಿಯಿಂದ ತಪ್ಪಿಸಿಕೊಂಡರೆ ಸಾಕು ಎನ್ನುವವರಿಗೆ ಇದೊಂದು ವರದಾನ.

■ ಎಸ್.ತುಂಬೆ